1	2	3	4
5.	13	ಶೋಲಾಪುರ–ಚಿತ್ರದುರ್ಗ–ಶಿವಮೊಗ್ಗ–ಶೃಂಗೇರಿ ಕಾರ್ಕಳ–ಮಂಗಳೂರು	715
6.	17	ಪನವೇಲ್–ಪಣಜಿಮ್–ಕಾರವಾರ–ಉಡುಪಿ–ಮಂಗಳೂರು–ಕಣ್ಣಾನೂರು–ತ್ರಿಚೂರ್	297
7.	48	ಬೆಂಗಳೂರು–ನೆಲಮಂಗಲ–ಕುಣಿಗಲ್–ಹಾಸನ ಮಂಗಳೂರು	320
8.	63	ಅಂಕೋಲಾ–ಹುಬ್ಬಳ್ಳಿ–ಹೊಸಪೇಟೆ–ಬಳ್ಳಾರಿ ಗೂಟಿ	369
9.	67 (ಮುಂದು ವರೆದುದು)	ಮೆಟ್ಟುಪಾಳ್ಯ–ಊಟಿ–ಗುಡ್ಲೂರು–ಗುಂಡ್ಲುಪೇಟೆ–ಬಳಿ ರಾಹೆ 212ರ ಜಂಕ್ಷನ್	27
10.	206	ತುಮಕೂರು–ಶಿವಮೊಗ್ಗ–ಹೊನ್ನಾವರ	370
11.	207	ಹೊಸೂರು (ರಾಹೆ 4ರ ಮೇಲೆ) ಸರ್ಜಾಪುರ–ದೇವನಹಳ್ಳಿ–ದಾಬಸ್‌ಪೇಟೆ	122
12.	209	ದಿಂಡಿಗಲ್–ಪಲ್ಲಾಚಿ–ಕೊಯಮತ್ತೂರು–ಅನ್ನೂರು–ಚಾಮರಾಜನಗರ–ಕೊಳ್ಳೇಗಾಲ–ಬೆಂಗಳೂರು	203
13.	212	ರಾಹೆ 17ರ ಕೇರಳದ ಕೋಜಿಕೋಡ್ ಬಳಿ ಮೈಸೂರು ಮೂಲಕ ರಾಹೆ 209ರ ಕರ್ನಾಟಕದ ಕೊಳ್ಳೇಗಾಲಕ್ಕೆ ಸೇರುವ ರಸ್ತೆ	150
14.	218	ಬಿಜಾಪುರ–ಹುಬ್ಬಳ್ಳಿ ರಸ್ತೆ	193
	218 (ಮುಂದು ವರೆದುದು)	ಬಿಜಾಪುರ–ಜೇವರ್ಗಿ–ಹುಮನಾಬಾದ್	220
		ಒಟ್ಟು	3973

647(810) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಕಾಮಗಾರಿ ಕೆಲಸದ ಶಂಕುಸ್ಥಾಪನೆ ಯಾವಾಗ ಆಯಿತು;

ಆ) ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಪ್ರಸ್ತುತ ಸದರಿ ಯೋಜನೆಯ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಖರ್ಚು ಮಾಡಲಾಗಿರುವ ಹಣದ ಮೊತ್ತವೆಷ್ಟು;

ಉ) ಇಲ್ಲದಿದ್ದಲ್ಲಿ, ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ಹೊಂದರೆಗಳೇನು;

ಊ) ಸದರಿ ಕಾಮಗಾರಿ ಕೆಲಸಗಳನ್ನು ಪೂರೈಸಲು ಸರ್ಕಾರ ಯಾವುದಾದರೂ ಕಾಲಮಿತಿಯನ್ನು ಹಾಕಿಕೊಳ್ಳಲು ಉದ್ದೇಶಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಶಂಕುಸ್ಥಾಪನೆಯು 1987ರಲ್ಲಿ ಆಯಿತು.

ಆ) ಕಬಿನಿ ಸಮಗ್ರ ಯೋಜನೆಯ ಪರಿಷ್ಕೃತ ಯೋಜನೆಯಲ್ಲಿ ಏತ ನೀರಾವರಿ ಯೋಜನೆಗೆ ರೂ. 702 ಕೋಟಿಗಳ ಮೊತ್ತವನ್ನು ಒದಗಿಸಿದೆ.

ಇ) ಸದರಿ ಯೋಜನೆಯ ಸರ್ವೇ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ) ಇಲ್ಲಿಯವರೆವಿಗೆ ಸರ್ವೇ ಕಾಮಗಾರಿಗಾಗಿ ರೂ. 4.08 ಲಕ್ಷ ಖರ್ಚು ಮಾಡಲಾಗಿದೆ.

ಉ) ಸರ್ವೇ ಕಾರ್ಯಗಳನ್ನು ಪೂರ್ಣಗೊಳಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಸದರಿ ಕಾಮಗಾರಿ ಕೆಲಸಗಳನ್ನು 2010ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

648(812) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸೌಧದ ಪಕ್ಕದಲ್ಲಿ ಭಾರೀ ಕಟ್ಟಡದ ಅವಶ್ಯಕತೆ ಇತ್ತೇ;

ಆ) ಇದರಿಂದ ವಿಧಾನ ಸೌಧದ ಪ್ರತಿಷ್ಠೆಗೆ ಕುಂದುಂಟಾಗುವುದಿಲ್ಲವೇ;

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚವೆಷ್ಟು;

ಈ) ಇದುವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಉ) ಸದರಿ ಕಟ್ಟಡದ ಪೂರ್ಣ ಕಾಮಗಾರಿಗಳನ್ನು ಮುಗಿಸಲು ಹಾಕಿಕೊಂಡಿರುವ ಕಾಲಮಿತಿ ಯಾವುದು;

ಊ) ಸದರಿ ಕಟ್ಟಡಕ್ಕೆ ಕೆಂಗಲ್ ಹನುಮಂತಯ್ಯನವರ ಹೆಸರಿನಲ್ಲಿ "ಕೆಂಗಲ್ ಹನುಮಂತಯ್ಯ" ಭವನವೆಂದು ನಾಮಕರಣ ಮಾಡಲು ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಇಲ್ಲಾ.

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಸುಮಾರು ರೂ. 125.00 ಕೋಟಿಗಳು.

ಈ) ಜೂನ್ 2004ರ ಅಂತ್ಯದವರೆಗೆ ರೂ. 88.36 ಕೋಟಿಗಳು ವೆಚ್ಚವಾಗಿರುತ್ತದೆ.

ಉ) ಟೆಂಡರ್ ಕರಾರಿನಂತೆ ಕಟ್ಟಡದ ಮೂಲ ಗುತ್ತಿಗೆ ಕಾಮಗಾರಿಗಳು ದಿನಾಂಕ 31-8-2004ರ ಒಳಗೆ ಪೂರ್ಣಗೊಳ್ಳುತ್ತವೆ ಹಾಗೂ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ.